# ಇಷ್ಟೇ ಸಾಕೆಂದಿದ್ದೆಯಲ್ಲೋ...

ನಾನೂ ಅವಳೂ ಭೇಟಿಯಾಗಿ ಒಂದು ವಾರದ ಮೇಲಾಗಿತ್ತು, ಗುರುವಾರ ಸಂಜೆ ಅವಳ ಫೋನ್ ಬಂತು. ಮೊದಲನೇ ಭೇಟಿಗೆ ಸಿಕ್ಕುವ ಮುಂಚೆಯೇ ಅವಳು ಹೇಳಿದ್ದಳು 'ಇದೇ ಮೊದಲ ಮತ್ತು ಕಡೆಯ ಭೇಟಿ'. ಅಲ್ಲದೇ ಭೇಟಿಯ ನಂತರ ನನ್ನ ಎಸ್ಸೆಮ್ಮೆಸ್ಸುಗಳಿಗೆಲ್ಲ ಉತ್ತರಿಸದೇ, ಪ್ರತಿಕ್ರಿಯಿಸದೇ ತಣ್ಣಗಾಗಿದ್ದಳು, ಹಾಗಾಗಿ ನಾನೂ ತಹತಹಸಿಕೊಂಡೂ ಸುಮ್ಮನಾಗಿದ್ದೆ...

"ಏನ್ಮಾಡ್ತಾ ಇದೀಯ?"

"ಏನ್ಮಾಡ್ತಾ ಇದೀಯ ಅಂದ್ರೆ?"

"ಅಲ್ಲಾ, ಈಗ ನನಗೆ ಹೇಳೋಕಾಗ್ದೇ ಇರೋವಂಥಾ ಕೆಲ್ಸ ಏನಾದ್ರೂ ಮಾಡ್ತಾ ಇದೀಯಾ?" ಅವಳು ಗಹಗಹಿಸಿದಳು, ನಾನೂ ನಕ್ಕೆ.

"ಇಲ್ಲ ಹಾಗೇನಿಲ್ಲ. ರೂಮಿನಲ್ಲಿದೀನಿ, ಓದ್ತಾ ಇದೀನಿ"

"ಏನು? ಮ್ಯಾಕ್ಸಿಮ್ ಗೋರ್ಕಿ ತಾನೆ?"

"ಹೌದು... ನಿನಗೆ ಹೇಗೆ ಗೊತ್ತಾಯ್ತು?"

"ಹಹಹಾ, ದೊಡ್ಡ ಸೀಕ್ರೆಟ್! ನಿನ್ನ ಎಸ್ಸೆಮ್ಮೆಸ್-ಗಳಲ್ಲೆಲ್ಲ ಅವನೇ ಇದ್ದಾನೆ ತಾನೆ?"

"ಓಹ್... ನೀನು ಆ ಎಸ್ಸೆಮ್ಮೆಸ್-ಗಳನ್ನೆಲ್ಲ ಓದ್ತೀಯಾ? ನೀನು ಒಂದಕ್ಕಾದರೂ ಉತ್ತರಿಸದೇ ಇದ್ದುದ್ದನ್ನು ನೋಡಿ ಇವಳು ನನ್ನ ನಂಬರಿಂದ ಬಂದಿರೋ ಎಸ್ಸೆಮ್ಮೆಸ್-ಗಳನ್ನೆಲ್ಲ ಹಾಗೇ ಡೆಲಿಟ್ ಮಾಡಿ ಬಿಡ್ತಾಳೇನೋ ಅಂದ್ಕೊಂಡಿದ್ದೆ!"

"ಸರಿ ಸರಿ, ಇವಾಗ ವಿಷ್ಯಕ್ಕೆ ಬರೋಣ, ಈ ಸಂಜೆ ಏನ್ಮಾಡ್ತಾ ಇದೀಯ?"

"ಮಾಡೋದೇನು? ಆಗ್ಲೇ ಎಂಟುಗಂಟೆಯಾಗ್ತಾ ಇದೆ, ಅಡುಗೆ ಮಾಡೋದು, ಊಟ ಮಾಡೋದು, ಮಲ್ಗೋದು!"

"ಎಷ್ಟು ಸಪ್ಪೆನಪ್ಪಾ ನಿನ್ ಜೀವನ! ನೋ ವಂಡರ್ ನಿನಗೆ ಯಾರೂ ಗರ್ಲ್-ಫ್ರೆಂಡ್ಸ್ ಇಲ್ಲ!"

"ಸರಿ, ನೀನು ಹೇಳು, ಏನ್ಮಾಡ್ತಾ ಇದೀಯ?"

"ಮಾಡೋದೇನು ಬಂತು, ಈವಾಗ ತಾನೇ ಆಫೀಸಿನಿಂದ ಬಂದೆ, ಸಕ್ಕತ್ ಹೆಕ್ಟಿಕ್ ಡೇ, ಜೊತೆಗೆ ಇಡೀ ದಿನ ನನ್ನ ಮ್ಯಾನೇಜರ್-ನ ಕಿರಿಕಿರಿ ಬೇರೆ. ನನ್ನನ್ನ ಕಣ್ಣಲ್ಲೇ ತಿಂದ್-ಬಿಡೋಥರಾ ನೋಡ್ತಾನೆ ಗೊತ್ತಾ? ಅವನ್-ಕಣ್ಣು ಕಿತ್ಹಾಕಿ ಬಿಡೋವಷ್ಟು ಕೋಪ ಬಂದ್ಬಿಡುತ್ತೆ ಒಮ್ಮೊಮ್ಮೆ!"

"ಅದ್ರಲ್ಲಿ ಅವನದ್ದೇನೂ ತಪ್ಪಿಲ್ಲ ಬಿಡು! ನೀನು ಕಣ್ಣಲ್ಲೇ ಏನೂ, ಎಲ್ಲಾ ರೀತಿಯಿಂದಲೂ ತಿಂದುಬಿಡೋ ಥರಾ ಇದೀಯ!" ನನ್ನ ಧೈರ್ಯಕ್ಕೆ ನಾನೇ ಬೆರಗಾದೆ! ಅವಳು ಸಿಹಿಯಾಗಿ ನಕ್ಕಳು.

"ಸೋ, ತಿಂತೀಯಾ?"

"ವಾಟ್?!"

"ನನ್ಜೊತೆ ಊಟ ಮಾಡೋಕೆ ಬರ್ತೀಯಾಂತ ಕೇಳ್ತಾ ಇದೀನಿ!"

"ಖಂಡಿತಾ! ಎಷ್ಟೊತ್ತಿಗೆ?"

"ಈವಾಗ ಎಂಟುಗಂಟೆ. ತುಂಬಾನೇ ಸುಸ್ತಾಗ್ತಾ ಇದೆ, ಸ್ನಾನ ಮಾಡ್ಕೋಬೇಕು ಅನಿಸ್ತಾ ಇದೆ. ಒಂಬತ್ತುವರೆಗೆ?"

"ಸರಿ... ಎಲ್ಲಿ?"

"ಮೊದ್ಲು ಗಾಡಿ ತಗೊಂಡು ಜಯದೇವ ಸರ್ಕಲ್ ಹತ್ರ ಬಾ, ಆಮೇಲೆ ನೋಡೋಣ!"

"ಒಂಬತ್ತುವರೆಗೆ ರೈಟ್?"

"ರೈಟ್!"

-------

ನಾನು ಕೇಳಿದೆ, "ಈಗ ಏನ್ಮಾಡೋಣ?"

"ಮಾಡೋಕೇನು ಬಹಳ ಇದೆ, ಚಾನ್ಸೂ ಇದೆ!" ತನ್ನ ಈ ನೇರಾನೇರ ನುಡಿಗೆ ಅವಳೇ ನಕ್ಕಳು. ಸಂಜೆಯ ದೂಳು-ದೂಳಿನಲ್ಲೂ ಹೊಳೆಯುತ್ತಿದ್ದಳು, ಸ್ನಾನ ಮಾಡಿದ ತಲೆಗೂದಲು ಇನ್ನೂ ನೀರು ಹನಿಸುತ್ತಿತ್ತು. ಕಡು ನೀಲಿಯದೊಂದು ತೆಳುವಾದ ಸ್ವೆಟರ್ ಧರಿಸಿದ್ದಳು, ಒಳಗಿನ ಬಿಳಿ ಟೀಶರ್ಟಿನ ಕತ್ತಿನಂಚಿನಲ್ಲಿ ಬೆಳ್ಳಿಯ ಕೂದಲೆಳೆಯಷ್ಟು ತೆಳ್ಳಗಿನ ಫಳಫಳಿಸುವ ಚೈನು! ಮೊಣಕಾಲಿಗೂ ಕೆಳಕ್ಕಿಳಿದು ಮೀನಖಂಡವನ್ನು ಅಪ್ಪಿಕೊಂಡಿದ್ದ ಮಾಸಲು ಕಪ್ಪು ಜೀನ್ಸ್ ಪ್ಯಾಂಟು, ಗುಲಾಬಿ-ಬಿಳಿ ಬಣ್ಣದ ಜಾಗಿಂಗ್ ಶೂಸ್.

"ಸರಿ ಮಾಡೋಕಿರೋ ಬಹಳಷ್ಟು ಕೆಲ್ಸಗಳಲ್ಲಿ ಒಂದನ್ನಾದ್ರೂ ಹೇಳು"

"ಒಂದು ಲಾಂಗ್ ರೈಡಿನಿಂದ ಶುರುಮಾಡೋಣ, ನಿನ್ನ ಬೈಕ್ ಮೇಲೆ!"

"ಸರಿ, ಆದ್ರೆ ಬೈಕ್ ನಾನು ಓಡಿಸ್ತೀನಿ"

"ಆಗ್ಲಿ"

"ಎಲ್ಲೀ ಆದ್ರೂ ಬೈಕ್ ಕೊಡು ಅಂತೆಲ್ಲಾ ಕೇಳಬಾರ್ದು?"

"ಓಕೇ!"

-------

ಅವಳು ಬಿಡುಬೀಸಾಗಿ, ನನಗಾಗಬಹುದಾದ(!) ಕಷ್ಟದ ಅರಿವಾಗಿ ಮೈಗೆ ಮೈ ತಾಕದಂತೆ, ಹೂವಷ್ಟೇ ಹಗುರವಾಗಿ ನನ್ನ ಹಿಂದೆ ಬೈಕನ್ನೇರಿ ಕುಳಿತಳು. ಎಲ್ಲಿಗೆ ಹೋಗೋದು ಅಂತಾ ಗೊತ್ತಾಗದೇ ನಾನು ಬೈಕನ್ನು ಬನ್ನೇರುಘಟ್ಟದ ರಸ್ತೆಯೆಡೆಗೆ ತಿರುಗಿಸಿದೆ. ಐಐಎಂಬಿ ದಾಟಿ ಮುಂದೆ ಸಾಗಿ, ಎಚ್ಚ್-ಎಸ್-ಬೀಸಿ ಹತ್ತಿರ ಆಟೋದವನು ಬಲಕ್ಕೆ ಬಂದ ಅಂತಾ ಗಕ್ಕನೆ ಬ್ರೇಕ್ ಹಾಕಿದೆ, ಇವಳು ನನ್ನ ಬೆನ್ನಿಗಂಟಿಕೊಂಡಳು!

ನಾನು ಯಾವುದೋ ಕನಸಿನಲ್ಲಿರುವವನಂತೆ ಲಹರಿಯಲ್ಲೇ ಹುಳಿಮಾವು ಗೇಟ್ ದಾಟಿ ಹಾಗೇ ಮುಂದೆ ಸಾಗಿ ಯಾವುದೇ ಆಲೋಚನೆಯಿಲ್ಲದೇ ಬಲಕ್ಕೆ ತಿರುಗಿಸಿದೆ....

ಕತ್ತಲಿನ ಮಣ್ಣು ರಸ್ತೆ, ಒಮ್ಮೆಗೇ ಅಮರಿಕೊಂಡ ಧೂಳು ಎಲ್ಲವನ್ನೂ ಕಂಡು, ಅವಳು "ಏನೋ ಇದು, ಕ್ರಾಸ್ ಕಂಟ್ರಿ ಬೈಕ್ ರೈಡಾ?" ಅಂದಳು, ನಾನು ಉತ್ತರಿಸದೇ ಹಾಗೇ ಬೈಕನ್ನು ಸಂಭಾಳಿಸಿಕೊಳ್ಳುತ್ತ ಹಿರಿದಾದ ನಯಸ್ಸಾದ ನೈಸ್ ರೋಡಿಗೆ ತಂದೆ, ಅವಳು 'ವಾವ್!' ಅಂದಳು.

"ಇದು ನೈಸ್ ರೋಡ್ ತಾನೇ?"

"ಹೌದು"

"ಕೂಲ್!"

-------

"ಹೆಲ್ಮೆಟ್ ತೆಗೆಯೋ!"

"ಏನು?"

"ನಿನ್ನ ಹೆಲ್ಮೆಟ್ ತೆಗಿಯೋ! ಹಾಗೇ ಗಾಡಿ ಸ್ವಲ್ಪ ಮೆಲ್ಲಗೆ ಓಡಿಸು, ನಾವು ಎಲ್ಲಿಗೂ ಅರ್ಜೆಂಟಾಗಿ ಹೋಗಬೇಕಾಗಿಲ್ಲ" ನಾನು ಎಡಗೈಯಲ್ಲಿ ಬೈಕ್ ಸಂಭಾಳಿಸುತ್ತಾ, ಬಲಗೈಯ್ಯಿಂದ ನನ್ನ ಹೆಲ್ಮೆಟ್ ತೆಗೆಯಲು ಪ್ರಯತ್ನಿಸಿದೆ, ಅವಳೂ ತನ್ನ ಕೈಗಳಿಂದ ನನ್ನ ಹೆಲ್ಮೆಟ್ ತೆಗೆಯಲು ಸಹಾಯ ಮಾಡಿದಳು. ನಂತರ, "ಕೊಡು, ನಾನೇ ಹಿಡ್ಕೋತೀನಿ" ಅಂತ ತನ್ನ ಕೈಯಲ್ಲೇ ಇಟ್ಟುಕೊಂಡಳು. ಬೀಸುಗಾಳಿಯಿಂದಾಗಿ ಕಿವಿಗಳು ತಣ್ಣಗಾಗಿ ನನ್ನ ಹೊಟ್ಟೆಯಾಳದಿಂದ ನಡುಕವೊಂದು ಹುಟ್ಟಿ ಬಂತು.

"ಆವತ್ತು, ಒಂದು ಹಗ್ ಕೊಡು ಅಂದ್ರೆ ಇಲ್ಲ ಅಂದ್ಬಿಟ್ಟೆ ಅಲ್ವಾ?" ಅವಳು ಕೇಳಿದಳು

"ಮ್..ಹೂಂ..."

"ಏನಂದಿದ್ದೆ ಅವತ್ತು? ಇದೇ ಮೊದಲ ಹಾಗೂ ಕಡೆಯ ಭೇಟಿ ಅಂದಿದ್ದಕ್ಕೆ 'ಹಗ್ ಅಂಡ್ ನೋ ಮೀಟ್'ಗಿಂತ 'ನೊ-ಹಗ್ ನೊ-ಮೀಟ್' ಚೆನ್ನಾಗಿದೆ ಅಂತ್ಹೇಳಿ ನಂಗೆ ನಿರಾಸೆ ಮಾಡಿದ್ದೆ ಅಲ್ವಾ?" ನಾನು ಪ್ರತ್ಯುತ್ತರ ನೀಡಲಿಲ್ಲ. ಅವಳು ನನ್ನ ಎಡ ಭುಜದ ಮೇಲೆ ತನ್ನ ಕತ್ತನ್ನಿರಿಸಿದ್ದಳು ಮತ್ತು ನನ್ನ ಕಿವಿಯೊಳಕ್ಕೆ ಉಸುರುತ್ತಿದ್ದಳು, ಅವಳ ಮುಂಗುರುಳಿನ ಎಳೆಯೊಂದು ನನ್ನ ಮುಖ-ಮೂಗು-ಕೆನ್ನೆಯ ಮೇಲೆಲ್ಲ ಹಾರಾಡುತ್ತ ಜುಮ್ಮೆನಿಸುತ್ತಿತ್ತು.

"ಈವಾಗ ನೋಡು, ನಿನ್ನನ್ನು ಕೇಳೋ ಹಂಗೇ ಇಲ್ಲ" ತನ್ನ ಖಾಲಿಯಿದ್ದ ಎಡಗೈಯಿಂದ ನನ್ನ ಡವಡವಿಸುತ್ತಿದ್ದ ಎದೆ ಬಳಸಿ ನನ್ನನ್ನು ಅಪ್ಪಿಕೊಂಡಳು, ಮೆಲ್ಲನೆ ಬಿಸಿಯುಸಿರು ಊದಿ ಎಡಗಿವಿಯನ್ನು ಕಚ್ಚಿದಳು, ನಾನು "ಔಚ್!" ಅಂದೆ. ಅವಳು ಮೊದಲೇ ಕಂಪಿಸುತ್ತಿದ್ದ ನನ್ನ ತಣ್ಣನೆಯ ಎಡಗೆನ್ನೆಗೆ ಬಿಸಿಯಾದ ಮೊದಲ ಹೂಮುತ್ತನಿತ್ತಳು...

-------

ನೈಸ್ ರಸ್ತೆಯಲ್ಲೇ ಮುಂದೆ ಸಾಗಿ, ಯಾವುದೋ ಮೇಲ್ಸೇತುವೆಯೊಂದರ ಮೇಲೆ ಬಂದಾಗ, "ಗಾಡಿ ನಿಲ್ಸೋ" ಅಂದಳು. ನಾನು ಅವಳ ಯಾವ ಅಣತಿಯನ್ನಾದರೂ ಕಣ್ಣುಮುಚ್ಚಿ ಪಾಲಿಸುವ ಸ್ಥಿತಿ ತಲುಪಿದ್ದೆ. ಗಾಡಿ ನಿಲ್ಲುತ್ತಲೂ ಛಂಗನೆ ನೆಗೆದು, ಮೇಲ್ಸೇತುವೆಯಂಚಿನ ಮೋಟುಗೋಡೆಗೆ ಆತು ನಿಂತು ಕೈಗಳನ್ನು ಚಾಚಿಕೊಂಡು ಆಕಾಶದೆಡೆಗೆ ನೋಡುತ್ತಾ ಸಶಬ್ದವಾಗಿ ನಿಟ್ಟುಸಿರು ಬಿಟ್ಟಳು. ನಾನು ಬೈಕ್ ನಿಲ್ಲಿಸಿ, ಛಳಿಗೆ ಥರ-ಥರ ನಡುಗುತ್ತ, ಬೆನ್ನ ಹಿಂದೆ ಮೆಲ್ಲಗೆ ಆವಿಯಾಗುತ್ತಿದ್ದ ಸಾನಿಧ್ಯದ ಬಿಸುಪನ್ನು ಆದಷ್ಟೂ ಅನುಭವಿಸುತ್ತ, ಪ್ಯಾಂಟಿನ ಜೇಬುಗಳೊಳಕ್ಕೆ ಕೈಗಳನ್ನಿಳಿಬಿಟ್ಟು ಅವಳೆಡೆಗೆ ನಡೆದೆ, ಹಾಗೇ ಆಕಾಶವನ್ನು ನೋಡಿದೆ... ಅಮಾವಾಸ್ಯೆ ಕಳೆದ ಆಕಾಶದ ತುಂಬಾ ಚುಕ್ಕಿಗಳ ಚಿತ್ತಾರ, ಅರ್ಧಕ್ಕೂ ಕಮ್ಮಿಯಿದ್ದ ಚಂದಿರ, ಸುಳಿಗಾಳಿ, ಕತ್ತಲು, ಮೇಲ್ಸೇತುವೆಯ

ಕೆಳಗೆ, ಆಚೀಚೆ ನಾಲ್ಕಾರು ಕಡೆಗೆ ಹೊರಟುಕೊಂಡಿದ್ದ ಕವಲು ರಸ್ತೆಗಳು, ಅತೀವಿರಳ ಅನ್ನಿಸೋ ವಾಹನ ಸಂಚಾರ, ಅವಳು ನನ್ನೆಡೆಗೆ ತಿರುಗದೇ ಹಾಡಲಾರಂಭಿಸಿದಳು...

"There's a calm surrender to the rush of day
When the heat of the rolling world can be turned away
An enchanted moment, and it sees me through
It's enough for this restless warrior just to be with you...

ಕಣ್ಣುಮುಚ್ಚಿಕೊಂಡಿದ್ದಳೋ ಏನೋ, ಮುಂದಿನ ಸಾಲು ನಾನು ಹಾಡಲಾರಂಭಿಸಿದೆ,

And can you feel the love tonight It is where we are
It's enough for this wide-eyed wanderer That we got this far
And can you feel the love tonight How it's laid to rest
It's enough to make kings and vagabonds Believe the very best...

ಅವಳು ಹಿಂದಿರುಗಿದಳು, ಕಿರುನಕ್ಕಳು. ಕಣ್ಣುಗಳಲ್ಲಿ ಅಚ್ಚರಿಬೆರೆತ ಮೆಚ್ಚುಗೆಯಿತ್ತು. ಅವಳೇ ನನ್ನೆಡೆಗೆ ಸಾಗಿ ಬಂದಳೋ, ನಾನೇ ಅವಳ ಬಳಿ ಸರಿದೆನೋ ಗೊತ್ತಿಲ್ಲ, ಗೊತ್ತಾದಾಗ ಅವಳ ಕೈಗಳು ನನ್ನ ಕೊರಳು ಬಳಸಿದ್ದವು, ನಾನು ಅವಳ ನಡುಬಳಸಿಕೊಂಡಿದ್ದೆ, ಅವಳು ತನ್ನ ತಲೆಯಿಂದ ನನ್ನ ತಲೆಗೆ ಮೆಲ್ಲನೇ ಢೀ ಕೊಟ್ಟಳು ಮತ್ತು ನನ್ನ ತಣ್ಣನೆಯ ಮೂಗಿಗೆ ಮೂಗು ತಾಗಿಸಿದಳು. ನಾನೇನು ಪ್ರಯತ್ನಿಸಿದೆನೋ ಗೊತ್ತಿಲ್ಲ, ಅವಳು ಹಲ್ಲು ಕಿರಿದಳು, "ನಾಟ್ ಸೋ ಫಾಸ್ಟ್, ನೊಟ್ ಸೋ ಈಸಿಲಿ!" ಎಂದು ನಕ್ಕು ನನ್ನ ಕೈಗಳಿಂದ ನುಣುಚಿಕೊಂಡು ಬೈಕಿನತ್ತ ನಡೆದಳು. ಹ್ಯಾಪ್ ಮೋರೆ ಹಾಕಿಕೊಂಡು ನಿಂತಿದ್ದ ನನ್ನೆಡೆಗೆ ನೋಡಿ, ಅಣಕಿಸುವ ಮೂತಿ ಮಾಡಿ "ಹೋಗೋಣ್ವಾ?" ಎಂದು ಕೇಳಿದಳು...

-------

"ಹೇಳು, ನೀನು ಎಷ್ಟು ರಿಲೀಜಿಯಸ್?"

"ಹಾಂ?" ನನ್ನ ಪ್ರಶ್ನೆಗೆ ಅವಳು ತಿನ್ನುತ್ತಿದ್ದ ಚಾಕೊಲೆಟ್ ಫ್ಯಾಂಟಸಿ ಬಿಟ್ಟು ಕತ್ತೆತ್ತಿ ನೋಡಿದಳು.
ನಾನು ಕುಡಿಯುತ್ತಿದ್ದ ಬಿಸ್ಸಿಬಿಸಿ ಕಾಫಿ ಬಿಟ್ಟು ಇನ್ನಷ್ಟು ಸ್ಪಷ್ಟವಾದೆ, "ಅದೇ, ನೀನು ದೇವ್ರನ್ನ ಎಷ್ಟು ನಂಬ್ತೀಯ ಅಂತಾ?"

"ಗೊತ್ತಿಲ್ಲ, ಯಾಕೆ ಕೇಳ್ತಾ ಇದೀಯ?"

"ಮೊದ್ಲು ಉತ್ತರ ಹೇಳು, ಒಂದರಿಂದ ಹತ್ತರ ಮಾಪಕದಲ್ಲಿ ನಿನ್ನ ನಂಬಿಕೆ ಎಷ್ಟು?"

"ಮ್.. ಏಳು!"

"ಸರಿ, ನನ್ನದು ಎರಡು. ಆದ್ರೆ ಒಂದ್ವಿಷ್ಯ ಹೆಳ್ಲಾ?" ಹೇಳು ಅನ್ನುವಂತೆ ಅವಳು ಭುಜ ಕುಣಿಸಿದಳು...

ನೈಸ್ ರಸ್ತೆಯಲ್ಲಿ ಸಾಗಿ, ಮೈಸೂರು ರಸ್ತೆ ತಲುಪಿ, ಮದ್ದೂರಿನ ಬಳಿಯಿರುವ 'ಕಾಫೀ ಡೇ'ಗೆ ಬಂದು ಕುಳಿತಿದ್ದೆವು. ಹಗಲಿರುಳೂ, ಇಪ್ಪತ್ತನಾಲ್ಕು ಘಂಟೆಯೂ ತೆರೆದಿರುವ ಮೈಸೂರು-ಬೆಂಗಳೂರು ಹೆದ್ದಾರಿಯ ಮೇಲಿನ ಆ 'ಕಾಫೀ ಡೇ'ಗೆ ಬಂದಿಳಿದ ಕೂಡಲೇ ಅವಳು 'ವಾವ್!' ಅಂದಿದ್ದಳು...

"ದೇವರು, ಪಾಪ-ಪುಣ್ಯ ಅನ್ನೋದೆಲ್ಲ ಇದ್ದು, ಸ್ವರ್ಗ ನರಕ ಅಂತೆಲ್ಲವೂ ಇದ್ದಿದ್ರೆ, ಸ್ವರ್ಗದಲ್ಲಿ ಅಮೃತ ಅನ್ನೋದೂ ಇದ್ದರೆ ಅದರ ರುಚಿ ಹೇಗಿರುತ್ತೆ ಗೊತ್ತಾ..." ನಾನು ಮಾತು ನಿಲ್ಲಿಸಿ ಧೈರ್ಯವಾಗಿ ಅವಳ ಚಾಕೋಲೇಟ್ ಸಿರಪ್ ಮೆತ್ತಿಕೊಂಡಿದ್ದ ಗುಲಾಬಿ ತುಟಿಗಳನ್ನೇ ನೋಡಿದೆ, "... ಈ ಕಾಫಿ ಥರಾ ಇರುತ್ತೆ!" ಜೋರಾಗಿ ನಕ್ಕೆ, ಅವಳ ಕಪೋಲಗಳು ರಾಗ ರಂಜಿತವಾದವು. ಅವಳು ನಾಚಿ ನಸುನಗುತ್ತ ಬಿಸಿಯಾದ ಕಿವಿಗಳನ್ನು ಉಜ್ಜಿಕೊಂಡಳು, "ಸ್ಟುಪಿಡ್!" ಅಂದು ನಕ್ಕಳು.

-------

ರಾತ್ರಿಯ ಒಂದೂವರೆಯಾಗುತ್ತಿತ್ತು, ವಾಪಸ್ಸು ಬೆಂಗಳೂರು ಹತ್ತಿರ ಬಂದಂತೆಲ್ಲ ನನ್ನೆದೆ ಯಾಕೋ ತಾಳ ಹಾಕಲಾರಂಭಿಸಿತ್ತು. ತಲೆ ಯಾಕೋ ಗಿರ್ಗಿಟ್ಲೆ, ಹೊಟ್ಟೆಯೊಳಗೆ ಚಿಟ್ಟೆಗಳ ರೆಕ್ಕೆ ಫಟಫಟ! ಏನೋ ಸಂಕಟ, ಮುಂದೇನು ಅನ್ನೋ ಸಂದಿಗ್ದ! ಆ ಸಂದಿಗ್ದತೆಯನ್ನು ಅವಳೇ ದೂರ ಮಾಡಿದ್ದಳು...

ಬೆಂಗಳೂರು ಹತ್ತಿರವಾದಂತೆಲ್ಲ ಅವಳ ಮಾತೂ ಕಡಿಮೆಯಾಗಿದ್ದವು. ಕೆಟ್ಟದ್ದೆನಿಸುವ ನಗುಬಾರದ ಜೋಕುಗಳು, ತಮಾಷೆಯ ಪ್ರಸಂಗಳು, ನನ್ನ ಕಾಲೆಳೆಯುವಿಕೆಯೆಲ್ಲ ಮುಗಿದು ಅವಳು ಸುಮ್ಮನಾಗಿದ್ದಳು. ಅವಳ ಬಿಸಿಯುಸಿರು ನನ್ನ ಕುತ್ತಿಗೆಯ ಸುತ್ತ ಬೆಂಕಿಯೂದುತ್ತಿತ್ತು, ಹೆಲ್ಮೆಟ್ಟಿನ ಒಳಗೆ, ಹಣೆಯ ಮೇಲೆಲ್ಲ ಬೆವರು! ಡೈರಿ ಸರ್ಕಲ್ ಮುಂದಿನಿಂದ ಅವಳೇ 'ಇಲ್ಲಿ ಲೆಫ್ಟು', 'ಇಲ್ಲಿ ರೈಟು' ಅಂತೆಲ್ಲ ಹೇಳಿಕೊಂಡು ಅವಳ ಮನೆಯೆದುರಿಗೆ ಕರೆತಂದಳು, ಪಿಸುದನಿಯಲ್ಲಿ "ಗಾಡಿ ಆಫ್ ಮಾಡು, ಎದುರುಗಡೆ ಅಲ್ಲಿ ಗಾಡಿಗಳು ನಿಂತಿದ್ದಾವಲ್ಲ, ಅಲ್ಲೇ ಪಕ್ಕಕ್ಕೆ ನಿಲ್ಲಿಸಿಬಿಡು" ಎಂದಳು, ನಾನು ನನ್ನ ಬೈಕು ನಿಲ್ಲಿಸಿಬರುವಷ್ಟರಲ್ಲಿ ಅವಳು ಗೇಟು

ಹತ್ತಿ ಮನೆಯ ಕಂಪೌಂಡಿನೊಳಕ್ಕೆ ಇಳಿದಾಗಿತ್ತು, ನಾನು ಢವಢವಿಸುವ ಹೃದಯದೊಂದಿಗೆ ಕಷ್ಟಪಟ್ಟು ಗೇಟು ಹತ್ತಿಳಿದೆ, 'ಜಾಸ್ತಿ ಶಬ್ದ ಮಾಡಬೇಡ' ಎನ್ನುತ್ತ ಮುಂಗಾಲುಗಳಲ್ಲಿ ಮೊದಲನೇ ಮಹಡಿಯನ್ನೇರಿ, ಎರಡನೆಯದನ್ನೂ ಮೀರಿ ಮೂರನೇ ಮಹಡಿಗೆ ಬಂದು ನನ್ನೆಡೆಗೆ ಹಿಂದಿರುಗಿ ನೋಡಿ ನಕ್ಕಳು.

"ಏನು?"

"ನಿನ್ನ ಮುಖ!"

"ಏನಾಗಿದೆ?"

"ಒಳ್ಳೇ ದೆವ್ವ ನೋಡಿದವನ ರೀತಿ ಇದೆ!"

ನಾನು ಬೆವರು ಬಸಿಯುತ್ತಿದ್ದ ನನ್ನ ಮುಖವನ್ನು ತೀಡಿಕೊಂಡು, ಗಾಬರಿಯಿಂದ ಬಿಗಿದುಕೊಂಡ ಎದೆಯನ್ನು ಹಗುರ ಮಾಡಿಕೊಳ್ಳುತ್ತ ನಗಲು ಪ್ರಯತ್ನಿಸಿದೆ. ಅವಳು ತನ್ನ ಸ್ವೆಟರ್ರಿನ ಜೇಬಿನಿಂದ ತನ್ನ ಮನೆಯ ಬೀಗ ತೆಗೆದಳು, ಮೆಲ್ಲನೆ ಬಾಗಿಲು ಮುಂದೆ ಮಾಡಿ, ಒಳಕ್ಕೆ ಸರಿಯುತ್ತ ಅಯೋಮಯನಾಗಿ ನಿಂತಿದ್ದ ನನ್ನೆಡೆಗೆ ನೋಡಿ ನಕ್ಕಳು, 'ಏನು? ರಾತ್ರಿಯೆಲ್ಲಾ ಬಾಲ್ಕನಿಯಲ್ಲೇ ನಿಲ್ಲುವ ಯೋಚನೆಯೇನು?' ಎಂದು ಕಣ್ಣು ಮಿಟುಕಿಸಿದಳು, ನಾನು ಏನು ಮಾಡಬೇಕೆಂದೂ ಗೊತ್ತಾಗದೇ ಬೆಪ್ಪನಂತೆ ನಿಂತಿದ್ದೆ.. ಅವಳು ಮೆಲ್ಲನೆ "ಸ್ಟುಪಿಡ್, ಇಡಿಯಟ್, ಫೂಲ್" ಎನ್ನುತ್ತಾ ನನ್ನ ಕೈ ಹಿಡಿದು ಒಳಕ್ಕೆಳೆದುಕೊಂಡಳು, ನಾನು ಎಡವಿ ಬಿದ್ದಿದ್ದೆ... ...ಮತ್ತು ಶುಕ್ರವಾರ ಬೆಳಿಗ್ಗೆ ಹನ್ನೊಂದಕ್ಕೆಲ್ಲ ನನ್ನ ಸಹೋದ್ಯೋಗಿ ಮಾಯಂಕ್-ಗೆ ಫೋನ್ ಮಾಡಿ 'ಇವತ್ತು ನಾನು ಸಿಕ್ ಲೀವ್' ಶುಕ್ಲಾ(ನನ್ನ ಮ್ಯನೇಜರ್)ಗೆ ಒಂದು ಈ-ಮೇಲ್ ಕಳಿಸಿಬಿಡು' ಅಂದಿದ್ದೆ...

(ಇಲ್ಲಿ ಉಪಯೋಗಿಸಿರುವ 'Can You Feel The Love Tonight' ಗೀತೆ 'ಸರ್ ಎಲ್ಟನ್ ಜಾನ್'(ಗೀತ ರಚನೆ: ಟಿಮ್ ರೈಸ್)ರವರಿಂದ ವಾಲ್ಟ್ ಡಿಸ್ನಿಯ ಅತ್ತ್ಯುತ್ತಮ ಚಿತ್ರಗಳಲ್ಲಿ ಒಂದಾದ 'ಲಯನ್ ಕಿಂಗ್'ಗಾಗಿ ಹಾಡಲ್ಪಟ್ಟಿದ್ದು...)
ಯೂ-ಟ್ಯೂಬ್ ಕೊಂಡಿ: http://www.youtube.com/watch?v=MssMvUqJv48&feature=related

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** *shivuks@gmail.com*